ಸಾಕ್ಷಿಯನ್ನು ದಿನಾಂಕಃ 23/01/2025 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಅರ್ಜಿದಾರ ಪರ ವಕೀಲರಿಂದಃ**

ಸದರಿ ಪ್ರಕರಣದಲ್ಲಿ ಅಪಘಾತವಾದ ಟ್ರಕ ನಂ. ಕೆಎ 63/3759 ನನ್ನ ಮಾಲಿಕತ್ವಕ್ಕೆ ಸೇರಿದ ವಾಹನ. ಸದರಿ ವಾಹನಕ್ಕೆ ಅಪಘಾತವಾದ ದಿನ ವಿಮೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ಈ ಅಪಘಾತಕ್ಕೆ ಸಂಬಂಧಪಟ್ಟಂತೆ ಗ್ರಾಮೀಣ ಪೊಲೀಸ ಠಾಣೆ ಕ್ರೈಮ ನಂ. ಯು ಆರ್ ಡಿ 28/19 ದಿಃ 07/06/2019 ರಂದು ಪ್ರಕರಣ ದಾಖಲಾಗಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಬಸಪ್ಪ ಊರ್ಫ ಬಸವರಾಜ ತಂದೆ ಈರಪ್ಪ ಮುತ್ತಣ್ಣವರ ಎಂಬುವವರು ಸದರಿ ಲಾರಿಯ ಚಾಲಕರು ಆಗಿದ್ದರು ಎಂದು ಪ್ರಕರಣ ದಾಖಲಾಗಿದೆ ಎಂದರೆ ಸಾಕ್ಷಿ ಅವರು ಕ್ಲೀನರ್ ಆಗಿದ್ದರು ಎಂದು ಹೇಳುತ್ತಾರೆ. ಈ ಘಟನೆ ಆದ ನಂತರ  ನಾನು ಬಳ್ಳಾರಿ ಪೊಲೀಸ ಠಾಣೆಗೆ ಹೋಗಿದ್ದೆ, ಸಾಕ್ಷಿಗೆ ಪೊಲೀಸರ ಮುಂದೆ ಹೇಳಿಕೆಯ ದೃಢೀಕೃತ ನಕಲನ್ನು  ಸಾಕ್ಷಿಗೆ ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿಃ 8 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 8(ಎ) ಎಂದು ಗುರುತಿಸಲಾಯಿತು. ನಿಮ್ಮ ತಕರಾರಿನಲ್ಲಿ ಪ್ಯಾರಾ ನಂ.12 (ಬಿ) ಸದರಿ ಬಸಪ್ಪ ನಮ್ಮ ಬಳಿ ಕ್ಲೀನರ್ ಎಂದು ಕೆಲಸ ಮಾಡುತ್ತಿದ್ದ ಎಂದು ಹೇಳಿ ಬರೆಸಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಬಸಪ್ಪ ನಮ್ಮ ಬಳಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ, ನಾನು ನಿಪಿಃ 8 ಕ್ಕೆ ಗಾಡಿ ಬಿಡಿಸಲು ಹೋದಾಗ ಪೊಲೀಸರು ನನ್ನ ಸಹಿ ಪಡೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ, ಗಾಡಿ ಬಿಡಿಸಿಕೊಳ್ಳಲು ಮಾತ್ರ ಸಹಿ ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವುದೇ ದಾಖಲೆ ಓದಿ ಸಹಿ ಮಾಡುತ್ತೀರಾ ಅಥವಾ ಹಾಗೆ ಸಹಿ ಮಾಡುತ್ತೀರಾ ಎಂದು ಕೇಳಲಾಗಿ ಸಾಕ್ಷಿ ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಎಂದು ಹೇಳುತ್ತಾರೆ. ಪೊಲೀಸರಿಗೆ ಇದರಲ್ಲಿ ಏನು ಬರೆದಿದೆ ಎಂದು ಕೇಳಿದ್ದೀರಾ ಎಂದರೆ ಸಾಕ್ಷಿ  ಕೇಳದ್ದೆ, ಆದರೆ ಅವರು ಗಾಡಿ ಬಿಡಿಸಿಕೊಳ್ಳಲು ಎಂದು ಹೇಳಿದ್ದರಿಂದಸಹಿ ಮಾಡಿದ್ದೇನೆಂದು ಹೇಳುತ್ತಾರೆ. ಗಾಡಿ ಬಿಡಿಸಿಕೊಳ್ಳುವಾಗ indinmity

Bond ಮೇಲೆ ಪೊಲೀಸರು ಸಹಿ ಮಾಡಿಸಿಕೊಳ್ಳುತ್ತಾರೆ ಹೊರತು ಹೇಳಿಕೆಗೆ ಅಲ್ಲ ಎಂದರೆ ಸರಿಯಲ್ಲ. ಬಸಪ್ಪ ರವರು ನಿಮ್ಮ ಗಾಡಿಯಲ್ಲಿ ಕೆಲಸ ಮಾಡುತ್ತಿದ್ದ, ಆ ಕೆಲಸದ ಒತ್ತಡದಿಂದ ತೀರಿಕೊಂಡಿದ್ದ ಎಂದರೆ ಸರಿಯಲ್ಲ. ನಿಮ್ಮ ಗಾಡಿಯಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಬಸಪ್ಪ ತೀರಿಕೊಂಡಿದ್ದರಿಂದ ನೀವು ಮತ್ತು ವಿಮಾ ಕಂಪನಿಯವರು ಭಾದ್ಯಸ್ಥರಾಗಿದ್ದೀರಿ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**2 ನೇ ಎದುರುದಾರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
23.01.2025
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**